ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ - ವಾದಿ ಪರ ಶ್ರೀ ಸಿ ಪಿ ಯು. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿ ನಮೂದಿಸಿರುವ ಎಲ್ಲ ಸಂಗತಿಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಿರುತ್ತದೆ.

ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಿಸಿದ 2015-16 ನೇ ಸಾಲಿನ ಪಹಣಿಪತ್ರಿಕೆಯನ್ನು ಹಾಜರುಪಡಿಸಿದ್ದು ನಿಪಿ-1 ಎಂದು, ದಿಃ 26-06-2015 ರ ಕ್ರಯಒಪ್ಪಂದ ಕರಾರುಪತ್ರವನ್ನು ಹಾಜರುಪಡಿಸಿದ್ದು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ ಇಂದ ಇ) ಎಂದು, ದಿಃ 25-04-2016 ರ ವಕೀಲರ ನೋಟೀಸ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ದಿಃ 30-04-2016 ರ ತಿದ್ದುಪಡಿ ನೋಟೀಸ್ ಪ್ರತಿಯನ್ನು ನಿಪಿ-4 ಎಂದು, ಅಂಚೆರಶೀದಿಗಳನ್ನು ನಿಪಿ-4(ಎ) ಮತ್ತು ನಿಪಿ-4(ಬಿ) ಎಂದು ಮತ್ತು ಅಂಚೆಸ್ವೀಕೃತಿಗಳನ್ನು ನಿಪಿ-4 (ಸಿ ಮತ್ತು ಡಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಕೆ ಎಂ ಜಿ ರವರಿಂದ ಪ್ರತಿವಾದಿ ಪರವಾಗಿ

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು